ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 592

ಉತ್ತರಿಸುವ ಸಚಿವರು : ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 11.12.2020

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಕೋವಿಡ್-19 ಲಾಕ್ ಡೌನ್ ಸಮಯದಲ್ಲಿ ಕೈಮಗ್ಗ ಮತ್ತು ಜವಳಿ ಕಾರ್ಮಿಕ ಕುಟುಂಬಗಳಿಗೆ ಸರ್ಕಾರದಿಂದ ಸಹಾಯಧನ ಘೋಷಿಸಲಾಗಿದೆಯೇ;	ರಾಜ್ಯದಲ್ಲಿನ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ **ಕೈಮಗ್ಗ ನೇಕಾರರಿಗೆ** "ನೇಕಾರ ಸಮ್ಮಾನ್ ಯೋಜನೆ" ಯನ್ನು ಘೋಷಿಸುವ ಮೂಲಕ ಪ್ರತಿ ಕೈಮಗ್ಗ ನೇಕಾರರಿಗೆ ವಾರ್ಷಿಕ ರೂ.2,000/-ಗಳ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮುಖಾಂತರ ನೀಡಲು ಆದೇಶ ಹೊರಡಿಸಲಾಗಿದೆ. ಸದರಿ ಯೋಜನೆಯಡಿ ಇದುವರೆಗೆ 50,511 ನೇಕಾರರು ಅರ್ಜಿಗಳನ್ನು ನೊಂದಾಯಿಸಿದ್ದು, ಇದುವರೆಗೆ 46,259 ನೇಕಾರರಿಗೆ ರೂ.925.18 ಲಕ್ಷಗಳ ಪರಿಹಾರಧನವನ್ನು ನೇರ ನಗದು ವರ್ಗಾವಣೆ ಮುಖಾಂತರ ವರ್ಗಾಯಿಸಲಾಗಿದೆ. "ಕೋವಿಡ್-19 ಪ್ರಯುಕ್ತ ವಿದ್ಯುತ್ ಮಗ್ಗ ನೇಕಾರರಿಗೆ ಆರ್ಥಿಕ ಬೆಂಬಲ ನೀಡುವ" ಸಂಬಂಧ ರಾಜ್ಯದಲ್ಲಿರುವ 1.25 ಲಕ್ಷ **ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಪ್ರತಿ ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ಕಾರ್ಮಿಕರಿಗೆ** ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ರೂ.2,000/-ಗಳ ಪರಿಹಾರಧನವನ್ನು ನೇರ ನಗದು ವರ್ಗಾವಣೆ ಮುಖಾಂತರ ನೀಡಲು ಆದೇಶವನ್ನು ಹೊರಡಿಸಲಾಗಿದೆ. ಸದರಿ ಯೋಜನೆಯಡಿ ಇದುವರೆಗೆ 56,449 ನೇಕಾರರು ಅರ್ಜಿಗಳನ್ನು ನೊಂದಾಯಿಸಿದ್ದು, ಇದುವರೆಗೆ 48,004 ನೇಕಾರರಿಗೆ ರೂ.960.08 ಲಕ್ಷಗಳ ಪರಿಹಾರಧನವನ್ನು ನೇರ ನಗದು ವರ್ಗಾವಣೆ ಮುಖಾಂತರ ವರ್ಗಾಯಿಸಲಾಗಿರುತ್ತದೆ.
(ಆ)	ಹಾಗಿದ್ದಲ್ಲಿ, ರಾಜ್ಯಾದ್ಯಂತ ಇಲ್ಲಿಯವರೆಗೆ ನೀಡಲಾದ ಒಟ್ಟು ಸಹಾಯಧನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

<table>
<tr>
<td>(ಇ)</td>
<td>ಇನ್ನು ಎಷ್ಟು ಕಾರ್ಮಿಕ ಕುಟುಂಬಗಳಿಗೆ ಸಹಾಯಧನ ನೀಡುವುದು ಬಾಕಿ ಇದೆ.</td>
<td>ಸದರಿ ಯೋಜನೆಯಡಿ ಆಧಾರ್ ಸೀಡಿಂಗ್ ಮತ್ತು NPCI Enable ಆಗದ ಕಾರಣಗಳಿಂದಾಗಿ ಒಟ್ಟು 12,697 ನೇಕಾರರಿಗೆ ಪರಿಹಾರಧನ ನೀಡುವುದು ಬಾಕಿ ಇದ್ದು, ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ.ಸಂ.</th><th>ವಿವರ</th><th>ಸಂಖ್ಯೆ</th></tr>
<tr><td>1</td><td>ಕೈಮಗ್ಗ ನೇಕಾರರು</td><td>4,252</td></tr>
<tr><td>2</td><td>ವಿದ್ಯುತ್ ಮಗ್ಗ ಕೂಲಿ ಕಾರ್ಮಿಕರು</td><td>8,445</td></tr>
<tr><td colspan="2">ಒಟ್ಟು</td><td>12,697</td></tr>
</table>
</td>
</tr>
<tr>
<td>(ಈ)</td>
<td>ಈ ಸಹಾಯಧನವನ್ನು ಪಡೆಯಲು ಕಾರ್ಮಿಕರಿಗೆ ಇರುವ ನಿಬಂಧನೆಗಳು ಯಾವುವು? (ಸಂಪೂರ್ಣ ವಿವರ ನೀಡುವುದು)</td>
<td>ಈ ಸಹಾಯಧನವನ್ನು ಪಡೆಯಲು ಕಾರ್ಮಿಕರಿಗೆ ಇರುವ ನಿಬಂಧನೆಗಳು ಕೆಳಕಂಡಂತಿವೆ:-

<u>ಕೈಮಗ್ಗ ನೇಕಾರರು</u>

ಕೈಮಗ್ಗ ನೇಕಾರರು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
ಹತ್ತಿ, ಉಣ್ಣೆ, ರೇಷ್ಮೆ ಮತ್ತು ಇತರೆ ಕೈಮಗ್ಗ ಚಟುವಟಿಕೆಗಳಲ್ಲಿ ತೊಡಗಿರಬೇಕು.
ನಾಲ್ಕನೇ ರಾಷ್ಟ್ರೀಯ ಕೈಮಗ್ಗ ಗಣತಿಯ ಪಟ್ಟಿಯಲ್ಲಿ ನೊಂದಾಯಿಸಿರಬೇಕು.
ಕೈಮಗ್ಗ ನೇಕಾರರು ಆಧಾರ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ಹೊಂದಿರಬೇಕು.
ಕೈಮಗ್ಗ ಗಣತಿಯ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಅರ್ಹ ಕೈಮಗ್ಗ ನೇಕಾರರಿದ್ದಲ್ಲಿ, ಪರಿಶೀಲಿಸಿ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗುವುದು ಹಾಗೂ ವರ್ಷವಾರು ನೇಕಾರರ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರವನ್ನು ಕೈಮಗ್ಗ ಮತ್ತು ಜವಳಿ ಇಲಾಖೆ ಹೊಂದಿರುತ್ತದೆ.

<u>ವಿದ್ಯುತ್ ಮಗ್ಗ ಕೂಲಿ ಕಾರ್ಮಿಕರು</u>

ಫಲಾನುಭವಿಯು ವಿದ್ಯುತ್ ಮಗ್ಗ ಘಟಕದಲ್ಲಿ ಕೂಲಿ ಕಾರ್ಮಿಕನಾಗಿ ಅಥವಾ ಸ್ವತಃ ಕಾರ್ಮಿಕನಾಗಿ ಕೆಲಸ ಮಾಡುತ್ತಿರಬೇಕು.
01 ರಿಂದ 20 ಹೆಚ್.ಪಿ. ವರೆಗೆ ವಿದ್ಯುತ್ ರಿಯಾಯಿತಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ವಿದ್ಯುತ್ ಮಗ್ಗ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.

</td>
</tr>
</table>

ಸಂ: ವಾಕ್ಯ 258 JAKE 2020

(ಶ್ರೀಮಂತ ಬಾಳಾಸಾಹೇಬ ಪಾಟೀಲ್)

ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 592 ಕ್ಕೆ ಅನುಬಂಧ

ನೇರ ನಗದು ವರ್ಗಾವಣೆ(ಡಿ.ಬಿ.ಟಿ) ಮುಖಾಂತರ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಪರಿಹಾರಧನ ನೀಡಲಾದ ಜಿಲ್ಲಾವಾರು ವಿವರ (ಮೊತ್ತ ರೂ.ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆ	ಕೈಮಗ್ಗ ನೇಕಾರರ ಸಂಖ್ಯೆ	ಡಿ.ಬಿ.ಟಿ ಮಾಡಲಾದ ಮೊತ್ತ	ವಿದ್ಯುತ್‌ಮಗ್ಗ ನೇಕಾರರ ಸಂಖ್ಯೆ	ಡಿ.ಬಿ.ಟಿ ಮಾಡಲಾದ ಮೊತ್ತ
1	ಬೆಂಗಳೂರು (ನ)	1114	22.28	7983	159.66
2	ಬೆಂಗಳೂರು(ಗ್ರಾ)	150	3.00	5204	104.08
3	ಬಾಗಲಕೋಟೆ	10316	206.32	10976	219.52
4	ಬೆಳಗಾವಿ	4371	87.42	14498	289.96
5	ಬಳ್ಳಾರಿ	1454	29.08	0	0.00
6	ಬೀದರ್	755	15.10	0	0.00
7	ಚಾಮರಾಜನಗರ	1817	36.34	0	0.00
8	ಚಿಕ್ಕಮಗಳೂರು	118	2.36	0	0.00
9	ಚಿಕ್ಕಬಳ್ಳಾಪುರ	1031	20.62	790	15.80
10	ಚಿತ್ರದುರ್ಗ	4784	95.68	26	0.52
11	ದಕ್ಷಿಣ ಕನ್ನಡ	93	1.86	0	0.00
12	ದಾವಣಗೆರೆ	449	8.98	53	1.06
13	ಧಾರವಾಡ	530	10.60	237	4.74
14	ಗದಗ	2167	43.34	2076	41.52
15	ಹಾಸನ	282	5.64	92	1.84
16	ಹಾವೇರಿ	3752	75.04	294	5.88
17	ಕಲಬುರಗಿ	791	15.82	50	1.00
18	ಕೊಡಗು	50	1.00	0	0.00
19	ಕೋಲಾರ	207	4.14	176	3.52
20	ಕೊಪ್ಪಳ	1357	27.14	726	14.52
21	ಮಂಡ್ಯ	150	3.00	267	5.34
22	ಮೈಸೂರು	372	7.44	92	1.84
23	ರಾಯಚೂರು	40	0.80	0	0.00
24	ರಾಮನಗರ	111	2.22	993	19.86
25	ಶಿವಮೊಗ್ಗ	262	5.24	0	0.00
26	ತುಮಕೂರು	5743	114.86	2891	57.82
27	ಉಡುಪಿ	60	1.20	0	0.00
28	ಉತ್ತರ ಕನ್ನಡ	33	0.66	11	0.22
29	ವಿಜಯಪುರ	1662	33.24	33	0.66
30	ಯಾದಗಿರಿ	494	9.88	0	0.00
ಒಟ್ಟು		44515	890.30	47468	949.36
ಎಲ್ಲಾ ಜಿಲ್ಲೆಗಳಿಂದ ಒಳಗೊಂಡಂತೆ ಡಿ.ಬಿ.ಟಿ ಆಗಿರುವ ಸಂಖ್ಯೆ		46259	925.18	48004	960.08